

# ಕಾಣುವ ಕಡಲೆಗೆ... ಹಂಬಲಿಸಿದೆ ಮನ...

ಹಸಿಯೇ ಇರಲಿ, ಬಿಸಿಯೇ ಇರಲಿ, ಬೇಯಿಸಿದ್ದಿರಲಿ, ಕರಿದಿದ್ದಿರಲಿ, ತಿನ್ನೋಕೆ ಕಡಲೆಕಾಯಿಯಿರಲಿ ಎನ್ನುವುದು ಕಡಲೆಪ್ರಿಯರ ಘೋಷಣಾವಾಕ್ಯ!

■ ನಳಿನಿ ಟಿ. ಭೀಮಪ್ಪ

‘ತಾಜಾ ತಾಜಾ ಕಳ್ಳೇಕಾಯ್ ಗರ್ಮಾಗರಂ ಕಳ್ಳೇಕಾಯ್ ಬೆಂಗಳೂರು ಕರಗದ ಬಸವನ ಪರಿಷೆಯ ಬಡವರ ಬಾದಾಮಿ ಕಳ್ಳೇಕಾಯ್...’

‘ಕರುಳಿನ ಕರೆ’ ಸಿನಿಮಾದ ಹಾಡಿನಲ್ಲಿ ನಟಿ ಕಲ್ಪನಾ ಕಡಲೆಕಾಯಿಯನ್ನು ಬಣ್ಣಿಸುತ್ತ ಹಾಡಿ ಕುಣಿಯುವುದನ್ನು ನೋಡಿದ ಯಾರಾದರೂ ‘ಕಡಲೆಕಾಯಿ ಕರೆ’ಗೆ ಓಗೊಡಬೇಕು. ಈಗಲೂ ಐಟಿ ಹಬ್ ಎಂದು ಹೆಸರು ಪಡೆದು, ಕ್ಲಬ್ಬು ಪಬ್‌ಗಳೇ ಹೆಚ್ಚಾಗಿ ತುಂಬಿ ತುಳುಕುತ್ತಿರುವ ಬೆಂಗಳೂರಿನಲ್ಲಿ ಕಡಲೆಕಾಯಿ ಪರಿಷೆ ಎನ್ನುವ ಹಬ್ಬ ತನ್ನ ಆಕರ್ಷಣೆಯನ್ನು ಹಾಗೆಯೇ ಉಳಿಸಿಕೊಂಡಿರುವುದನ್ನು ನೋಡಿದಾಗ ‘ಅಬ್ಬಾ!’ ಎನ್ನುವ ಉದ್ಗಾರ ತಾನಾಗೇ ಬಾಯಿಂದ ಹೊರಡುತ್ತದೆ. ಲಕ್ಷಾಂತರ ಜನ ಸೇರಿ, ಕಡಲೆಕಾಯಿ ಎಂಬ ಸೆಲೆಬ್ರಿಟಿಯ ಜೊತೆಗೆ ಫೋಟೊ, ಸೆಲ್ಫೀ ತೆಗೆಯುತ್ತಿರುವವರನ್ನು ನೋಡುತ್ತಿದ್ದರೆ ‘ಕಡಲೆಗಿಂತ ರುಚಿ ಬೇರೆಯಿಲ್ಲ... ಹ್ಞಾ, ಒಪ್ಪಿಕೊಂಡೋರು ದಡ್ಡರಲ್ಲ’ ಎಂದು ಸಲೀಸಾಗಿ ಹೇಳಬಹುದು. ಅಂದು ಮಾತ್ರ ಬಸವನಿಗೆ ಕಡಲೆಯ ಪುಷ್ಕಳ ಭೋಜನ ನೈವೇದ್ಯ. ಜಾತ್ರೆಗೆ ಪಾತ್ರವಾಗುವ ಮಟ್ಟಿಗೆ ಮಹತ್ವ ಪಡೆದಿರುವ ಕಡಲೇಬೀಜಕ್ಕೆ ನಮೋನಮಃ ಎನ್ನಬಹುದು.



ಬಹುಶಃ ಹೀಗೆ ಕಡಲೆಕಾಯಿಯಷ್ಟು ಹೊಗಳಿಸಿಕೊಂಡ ಮತ್ತೊಂದು ಕಾಯಿ ಕಂಡುಬಂದಿದ್ದು ಕಾಣೆ. ಹಸಿಯೇ ಇರಲಿ, ಬಿಸಿಯೇ ಇರಲಿ, ಬೇಯಿಸಿದ್ದಿರಲಿ, ಕರಿದಿದ್ದಿರಲಿ, ತಿನ್ನೋಕೆ ಕಡಲೆಕಾಯಿಯಿರಲಿ ಎನ್ನುವುದು ಕಡಲೆಪ್ರಿಯರ ಘೋಷಣಾವಾಕ್ಯ ಎನ್ನಬಹುದು. ಪ್ರತಿದಿನ ಒಂದು ಮುಷ್ಟಿಯಷ್ಟು ಬಾದಾಮಿ ತಿನ್ನುತ್ತಿದ್ದರೆ ಹೃದಯದ ಕಾಯಿಲೆಗಳಿಂದ ದೂರವಿರಬಹುದು ಎಂಬುದು ವೈದ್ಯರ ಅಂಬೋಣವಾದರೂ, ಬಾದಾಮಿಯ ಬೆಲೆ ಕೇಳುತ್ತಿದ್ದರೆ, ಮುಷ್ಟಿಗಾತ್ರದ ಹೃದಯ, ಮುಷ್ಟಿಯುದ್ಧದಲ್ಲಿ ಗುದ್ದಿಸಿಕೊಂಡಂತೆ, ತನ್ನ ಲಯವೇರಿಸಿಕೊಂಡು ತೇಕುವುದಂತೂ ನಿಜ. ಹಾಗಾಗಿ ಬಡವರ ಬಾದಾಮಿ ಕಡಲೆಕಾಯಿ ಎಲ್ಲರಿಗೂ ಅಚ್ಚುಮೆಚ್ಚು.

ಬಯಲುಸೀಮೆಯ ಕಡೆಗಳಲ್ಲಿ ಕಡಲೆಕಾಯಿ ಯಾವುದಾದರೂ ರೂಪದಲ್ಲಿ ಆಹಾರದಲ್ಲಿ ಸೇರ್ಪಡೆಯಾಗೇ ಇರುತ್ತದೆ. ರೊಟ್ಟಿ, ಚಪಾತಿ, ದೋಸೆ ಎಲ್ಲದಕ್ಕೂ ಶೇಂಗಾ ಚಟ್ನಿಯೇ. ತೆಂಗಿನಕಾಯಿಗೆ ಪ್ರವೇಶ ತುಂಬ ಕಡಿಮೆ. ಅದಕ್ಕೆ ಮೊಸರು, ತುಪ್ಪ ಸೇರಿಸಿಕೊಂಡು ಲೊಟ್ಟೆ ಹೊಡೆಯುತ್ತ ತಿನ್ನುತ್ತಾರೆ. ಅವಲಕ್ಕಿ, ಮಂಡಕ್ಕಿ, ಉಪ್ಪಿಟ್ಟು, ಚಿತ್ರಾನ್ನ ಇವುಗಳ ಒಗ್ಗರಣೆಯಲ್ಲಿ, ದ್ರಾಕ್ಷಿ ಗೋಡಂಬಿಗಳಂತೆ, ಈ ಕರಿದ ಶೇಂಗಾಕಾಳುಗಳು ಹಣಕಿ ಹಾಕುತ್ತಿದ್ದರೆ ಮಾತ್ರ ನೋಡೋಕೂ ಲಕ್ಷಣ, ತಿನ್ನೋಕೂ ರುಚಿ ಎನ್ನುವುದು ಬಹುಜನರ ಉಕ್ತಿ. ಹೋಳಿಗೆ, ಉಂಡೆ, ಸಾರು, ಪಲ್ಯ, ಗೊಜ್ಜುಗಳೂ ಶೇಂಗಾಮಯವೇ.



